**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ.05.03.2024**

## ಪಾಟಿ ಸವಾಲುಃ ಪ್ರತಿವಾದಿಗಳ ಪರ ಶ್ರೀ.ಎನ್ ಆರ್ ಎಸ್ ವಕೀಲರಿಂದಃ

1. ನಾನು ಯಾವುದೇ ವಿದ್ಯಾಬ್ಯಾಸ ಮಾಡಿರುವುದಿಲ್ಲ. ನಾನು ವ್ಯವಸಾಯ ಮಾಡುತ್ತೇನೆ. ನಾನು ಚಾಲಕನಾಗಿ ಕೆಲಸ ಮಾಡುತ್ತೇನೆ ಎಂದರೆ ಸರಿ. ನಾನು ಈ ದಾವೆಯಲ್ಲಿ ಸಾಕ್ಷಿ ನುಡಿಯುವಂತೆ ಸಮನ್ಸ್ ಬಂದಿರಲಿಲ್ಲ ಎಂದರೆ ಸರಿ. ನನ್ನನ್ನು ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ವಾದಿಯವರು ಕರೆದುಕೊಂಡು ಬಂದಿರುತ್ತಾರೆ. ಈ ದಾವೆಯನ್ನು ವಾದಿಯವರು ಪ್ರತಿವಾದಿಗಳ ವಿರುದ್ದ ಸಲ್ಲಿಸಿರುತ್ತಾರೆ. ಈ ದಾವೆಯನ್ನು ವಾದಿ ಸರ್ವೆ ನಂ.95/2 ಆಸ್ತಿಗೆ ಸಂಬಂದಿಸಿದಂತೆ ಸಲ್ಲಿಸಿರುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿರುವ ವಿಚಾರವನ್ನು ನಾನು ತಿಳಿದುಕೊಂಡಿರುತ್ತೇನೆ. ಸದರಿ ವಿಚಾರವನ್ನು ನಾನೇ ಹೇಳಿ ಬರೆಸಿರುತ್ತೇನೆ. ದಾವಾ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ-ಗುಂಡುತೋಪು, ಪಶ್ಚಿಮಕ್ಕೆ-ಆಂಜಿನಪ್ಪ ಮತ್ತು ಸಂಪಂಗಿರಾಮಯ್ಯ ನವರ ಆಸ್ತಿ, ಉತ್ತರಕ್ಕೆ-ಚೆನ್ನರಾಯಪ್ಪನ ಆಸ್ತಿ, ದಕ್ಷಿಣಕ್ಕೆ-ಪ್ರತಿವಾದಿಗಳ ಆಸ್ತಿ ಇರುತ್ತದೆ. ವಾದಿಯು ದಾವಾ ಆಸ್ತಿಯನ್ನು ಖರೀದಿಸಿದ್ದು ಅದಕೆಕ ತೊಂದರೆ ಕೊಟ್ಟ ಕಾರಣ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಆ ರೀತಿ ವಾದಿಯ ಸ್ವಾದೀನಕ್ಕೆ ಯಾವ ದಿನಾಂಕದಂದು ತೊಂದರೆ ಕೊಟ್ಟರು ಎಂದು ಈಗ ನೆನಪಿರುವುದಿಲ್ಲ. ಆ ರೀತಿ ವಾದಿಯ ಸ್ವಾದೀನಕ್ಕೆ ತೊಂದರೆ ಕೊಡುವಾಗ ನಾನು ಸ್ಥಳದಲ್ಲಿ ಇರಲಿಲ್ಲ.

2. ನಾನು ಮಂಡಿಬೆಲೆ ಗ್ರಾಮದಲ್ಲಿ ಜಮೀನನ್ನು ಹೊಂದಿರುತ್ತೇನೆ. ನನ್ನ ಜಮೀನಿನಿಂದ ದಾವಾ ಆಸ್ತಿಗೆ 2 ಕಿ ಮಿ ಅಂತರ ಇರುತ್ತದೆ. ದಾವಾ ಆಸ್ತಿಯು ಮೂಲತಃ ನರಸಿಂ ಹಯ್ಯನವರಿಗೆ ಸೇರಿದ್ದು ಅವರ ನಂತರ ಜಯಮ್ಮ ನಿಗೆ ಸೇರುತ್ತದೆ. ಜಯಮ್ಮನ ಗಂಡನಿಂದ ವಾದಿ ಖರೀದಿ ಮಾಡಿರುತ್ತಾರೆ. ದಾವಾ ಆಸ್ತಿ ಮೂಲತಃ ಮುನಿಸೊಣ್ಣಪ್ಪನಿಗೆ ಸೇರಿದ್ದು ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂದಿಸಿದ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ದಾವಾ ಆಸ್ತಿಯಲ್ಲಿ ಮುನಿಸೊಣ್ಣಪ್ಪ ಅವರ ನಂತರ ಅವರ ಮಕ್ಕಳು ಸ್ವಾದೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ.95/2 ರಲ್ಲಿ ಪ್ರತಿವಾದಿಗಳು ಎಷ್ಟು ವಿಸ್ತೀರ್ಣಕ್ಕೆ ಇದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ ಆದರೆ ವಾದಿಗಳು 8 ಗುಂಟೆಗೆ ಇದ್ದಾರೆ ಎಂದು ನನಗೆ ಗೊತ್ತಿರುತ್ತದೆ, ಸದರಿ 8 ಗುಂಟೆ ಆಸ್ತಿಯಲ್ಲಿ ಪ್ರತಿವಾದಿಗಳಿಗೆ 4 ಗುಂಟೆ ಸೇರಬೇಕಾಗಿದೆ ಎಂದು ಹೇಳುತ್ತಿದ್ದಾರೆ ಎಂಬ ವಿಚಾರ ಗೊತ್ತಾ ಎಂದರೆ ಸಾಕ್ಷಿ ಗೊತ್ತು ಆದರೆ ಅದು ಸುಳ್ಳು ಎಂದು ನುಡಿಯುತ್ತಾರೆ. ಉಳಿದ 4 ಗುಂಟೆ ಯಾರಿಗೆ ಸೇರಿದ್ದು ಎಂದರೆ ಸಾಕ್ಷಿ 8 ಗುಂಟೆ ಆಸ್ತಿ ವಾದಿಗೆ ಸೇರಬೇಕಾಗಿದೆ ಎಂದು ನುಡಿಯುತ್ತಾರೆ. ವಾದಿಯ ಹೆಸರಿನಲ್ಲಿರುವ ದಾಖಲಾತಿಗಳನ್ನು ನಾನು ನೋಡಿರುತ್ತೇನೆ. ಆ ರೀತಿ ನಾನು ಕ್ರಯ ಪತ್ರ ನೋಡಿರುತ್ತೇನೆ. ದಾವಾ

ಆಸ್ತಿಗೆ ಸಂಬಂದಿಸಿದ 1968 ರಿಂದ ಪಹಣಿಗಳನ್ನು ನಾನು ನೋಡಿರುವುದಿಲ್ಲ. ವಾದಿ ಮತ್ತು ಪ್ರತಿವಾದಿಗಳ ನಡುವೆ ಕಂದಾಯ ನ್ಯಾಯಾಲಯದಲ್ಲಿ ಪ್ರಕರಣ ನೆಡೆಯುತ್ತಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ಅದೇ ವಿಚಾರವಾಗಿ ದೇವನಹಳ್ಳಿ ಹಿರಿಯ ದಿವಾನಿ ನ್ಯಾಯಾಲಯದಲ್ಲಿ ಇರುವ ಅಸಲು ದಾವಾ ವಿಚಾರವು ಸಹ ನನಗೆ ಗೊತ್ತಿರುವುದಿಲ್ಲ. ನಾನು ವಾದಿ ಹೇಳಿಕೊಟ್ಟಂತೆ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಪ್ರತಿವಾದಿಗಳಿಗೆ ಅನಾನೂಕೂಲ ಮಾಡಬೇಕು ಮತ್ತು ವಾದಿಗೆ ಅನುಕೂಲ ಮಾಡಬೇಕು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಮರು ವಿಚಾರಣೆಃ ಇಲ್ಲ.)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**

ಪಿಡಬ್ಲೂ-1 ಓ.ಎಸ್.ನಂ.377/2020

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ.07.11.2023**

**ಮುಂದುವರಿದ ಪಾಟಿ ಸವಾಲುಃ ಪ್ರತಿವಾದಿಗಳ ಪರ ಶ್ರೀ.ವೈ.ಎನ್.ಎಸ್ ವಕೀಲರಿಂದಃ**

6. ಪ್ರತಿವಾದಿಗಳು ದಾವಾ ಆಸ್ತಿಗೆ ಸಂಬಂದಿಸಿದ ತಹಶಿಲ್ದಾರ್ ರವರು ಮಾಡಿದ ಆದೇಶವನ್ನು ಪ್ರಶ್ನಿಸಿ ಉಪ ವಿಭಾಗಧಿಕಾರಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಂಖ್ಯೆ.297/2021 ನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ಅದೇ ರೀತಿ ಪ್ರತಿವಾದಿಗಳು ನನ್ನ ವಿರುದ್ದ ದೇವನಹಳ್ಳಿ ಹಿರಿಯ ದಿವಾನಿ ನ್ಯಾಯಲಯದಲ್ಲಿ ದಾವೆ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ಅದು ನನ್ನ ಗಮನಕ್ಕೆ ಬಂದಿಲ್ಲ ಎಂದು ನುಡಿಯುತ್ತಾರೆ. ನಾನು ದಿಃ03.07.2023 ರಂದು ಸಾಕ್ಷಿ ನುಡಿದ್ದೇನೆ ಎಂದರೆ ಸರಿ . ದಿಃ06.08.2023 ರಂದು ದಾವಾ ಆಸ್ತಿಗೆ ಸಂಬಂದಿಸಿದಂತೆ ಸರ್ವೆ ಮಾಡಿಸುವ ಸಲುವಾಗಿ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿ . ಸಾಕ್ಷಿಗೆ ಈಗ ಸದರಿ ಅರ್ಜಿಯ ಜೆರಾಕ್ಸ್ ಪ್ರತಿಯನ್ನು ತೋರಿಸಲಾಗಿ ಅದನ್ನು ಸಾಕ್ಷಿ ನೋಡಿ ಗುರುತಿಸಿದ ಕಾರಣ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ನಂತರ ಪ್ರತಿವಾದಿಗಳು ಸದರಿ ಅರ್ಜಿಗೆ ತಕರಾರು ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗಳ ತಂದೆ ಮತ್ತು ಕಣ್ಣಮ್ಮನವರಿಗೆ ಆದ ಕ್ರಯ ಪತ್ರವನ್ನು ರದ್ದು ಪಡಿಸುವಂತೆ ಯಾವುದೇ ದಾವೆ ಸಲ್ಲಿಸಿರುವುದಿಲ್ಲ ಎಂದರೆ ಸರಿ.

7. ಈ ದಾವೆಯನ್ನು ನಾನು ಪ್ರತಿವಾದಿಗಳ ವಿರುದ್ದ 8 ಗುಂಟೆ ಆಸ್ತಿಗೆ ಸಲ್ಲಿಸಿರುತ್ತೇನೆ. ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ 4 ಗುಂಟೆಗೆ ಹಿತಾಸಕ್ತಿ ಇರುವುದು ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ಹಾಜರು ಪಡಿಸಿರುವ ದಾಖಲಾತಿಗಳ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. ನಿಪಿ-6 ರಿಂದ 8 ದಾಖಲೆಗಳನ್ನು ತಮ್ಮಣ್ಣನವರಿಗೆ ದಾವಾ ಆಸ್ತಿ ಯಾವ ರೀತಿ ಬಂತು ಎಂದು ತೋರಿಸಲು ಹಾಜರು ಪಡಿಸಿರುತ್ತೇನೆ. ಸದರಿ ದಾಖಲಾತಿಗಳಲ್ಲಿ ಬರೆದಿರುವ ಉಲ್ಲೇಖಗಳ ಬಗ್ಗೆ ತಿಳಿದುಕೊಂಡಿರುತ್ತೆನೆ. ನಾನು ಕನ್ನಡ ಓದಲು ಬರೆಯಲು ತಿಳಿದುಕೊಂಡಿದ್ದೇನೆ ಎಂದರೆ ಸರಿ . ನಿಪಿ-6 ರಿಂದ 8 ಕಲಂ.12 ರಲ್ಲಿ ಮುನಿಸೊನ್ನಪ್ಪನ ಹೆಸರು ದಾಖಲಾಗಿದೆ ಎಂದರೆ ಸರಿ. ಸದರಿ ಮುನಿಸೊನ್ನಪ್ಪ ಪ್ರತಿವಾದಿಗಳ ತಂದೆ ಎಂದರೆ ಸರಿ. ನಿಪಿ-6 ರಿಂದ 8 ರಲ್ಲಿ ಕಲಂ.12 ರಲ್ಲಿರುವ ನಮೂದನೆಗಳನ್ನು ವಜಾ ಮಾಡುವಂತೆ ಯಾವುದೇ ಮೇಲ್ಮನವಿ ಮತ್ತು ದಾವೆ ಸಲ್ಲಿಸಿರುವುದಿಲ್ಲ ಎಂದರೆ ಸಾಕ್ಷಿ ನಮ್ಮ ವಕೀಲರಿಗೆ ಹೇಳಿರುತ್ತೇನೆ ಎಂದು ನುಡಿಯುತ್ತಾರೆ.

ಪ್ರತಿವಾದಿಗಳು ಸಲ್ಲಿಸಿರುವ 8 ದಾವೆಗಳ ಬಗ್ಗೆ ವಾದ ಪತ್ರದಲ್ಲಾಗಲಿ, ಪ್ರಮಾಣ ಪತ್ರದಲ್ಲಾಗಲಿ ತಿಳಿಸಿಲ್ಲ ಎಂದರೆ ಸಾಕ್ಷಿ ಈ ದಾವೆ ಸಲ್ಲಿಸಿದ ನಂತರ ಸದರಿ ದಾವೆಗಳು ಹುಟ್ಟಿಕೊಂಡಿದೆ ಎಂದು ನುಡಿಯುತ್ತಾರೆ.

8. ಪ್ರತಿವಾದಿಗಳು ಸಲ್ಲಿಸಿರುವ ಲಿಖಿತ ಹೇಳಿಕೆಯ ಬಗ್ಗೆ ನಮ್ಮ ವಕೀಲರ ಮೂಲಕ ತಿಳಿದುಕೊಳ್ಳುವ ಪ್ರಯತ್ನ ಮಾಡಿರುತ್ತೇನೆ. ಪ್ರತಿವಾದಿಗಳು ಎಲ್ಲಾ ವಿವರವನ್ನು ತಮ್ಮ ಲಿಖಿತ ಹೇಳಿಕೆಯಲ್ಲಿ ತಿಳಿಸಿದ್ದಾರೆ ಎಂದರೆ ಸರಿ . ನಂತರದಲ್ಲಿ ಪ್ರತಿವಾದಿಗಳ ವಿರುದ್ದ ಯಾವುದೇ ಕಾನೂನು ಕ್ರಮ ಜರುಗಿಸಿರುವುದಿಲ್ಲ ಎಂದರೆ ಸರಿ . ಪ್ರತಿವಾದಿಗಳ ತಂದೆಗೆ ಹಾಗೂ ಕಣ್ಣಮ್ಮನವರಿಗೆ ಆದ ಕ್ರಯ ಪತ್ರಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ ಸಾಕ್ಷಿ ಮುಂದುವರಿದು ಮುಂದಿನ ದಿನಗಳಲ್ಲಿ ಹಾಜರು ಪಡಿಸುತ್ತೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ಖರೀದಿಸುವ ಮೊದಲು ಕಾನೂನು ತಜ್ಞರಿಂದ ಅಬಿಪ್ರಾಯವನ್ನು ಪಡೆದುಕೊಂಡಡಿರುತ್ತೇನೆ. ಸದರಿ ಅಭಿಪ್ರಾಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ . ದಾವಾ ಆಸ್ತಿಯನ್ನು ಖರೀದಿಸುವ ಮೊದಲು ರುಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ಸದರಿ ರುಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿರಬಹುದು. ಸದರಿ ರುಣಭಾರ ರಾಹಿತ್ಯ ಪ್ರಮಾಣ ಪತ್ರಗಳನ್ನು ಉದ್ದೇಶಪೂರ್ವಕವಾಗಿ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ.

9. ದಾವಾ ಸ್ವತ್ತಿನ ಸ್ವಾಧೀನ ಮತ್ತು ದಾವಾ ಸ್ವತ್ತು ಎಲ್ಲಿದೆ ಎಂದು ಗೊತ್ತಿಲ್ಲದೆ ಇರುವ ಕಾರಣ ನಿಡಿ-1 ರಂತೆ ಅರ್ಜಿ ಸಲ್ಲಿಸಿದ್ದೇನೇ ಎಂದರೆ ಸಾಕ್ಷಿ ಇನ್ನೊಮ್ಮೆ ಮಾಡಲಿ ಎಂದು ಅರ್ಜಿ ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ಆ ರೀತಿ ಪೋಲಿಸ್ ಬಂದೋಬಸ್ತಿನಲ್ಲಿ ಅಳತೆ ಮಾಡಿ ಕೊಡುತ್ತಾರೆ ಎಂದು ಪುನಃ ಅರ್ಜಿ ಸಲ್ಲಿಸಿದ್ದೇನೆ. ನಾನು ಪ್ರತಿವಾದಿಗಳನ್ನು ಹೊರತು ಪಡಿಸಿ ಬೇರೆ ಯಾರ ವಿರುದ್ದ ದಾವೆ ಸಲ್ಲಿಸಿಲ್ಲ. ಸುಮಾರು 10 ದಾವೆಗಳಲ್ಲಿ ನಾನು ಪಕ್ಷಗಾರನಾಗಿದ್ದಾನೆ ಎಂದರೆ ಸರಿಯಲ್ಲ. ಶಿಡ್ಲಘಟ್ಟ ನ್ಯಾಯಾಲಯದಲ್ಲಿ ನನ್ನ ವಿರುದ್ದ ಕ್ರಿಮಿನಲ್ ಪ್ರಕರಣಗಳು ಇದೆ ಎಂದರೆ ಸಾಕ್ಷಿ ನಾನು ದುಡ್ಡು ಕೊಟ್ಟಿದ್ದು ಗಲಾಟೆ ಆದ ಬಗ್ಗೆ ಇರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ದಾವಾ ಆಸ್ತಿಯ ಸ್ವಾಧೀನ ಹೊಂದಿದ್ದಾರೆ ಎಂದು ಗೊತ್ತಿದ್ದರು ಸಹ ಸುಲಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕು ಅಧಿಕಾರ, ಸ್ವಾಧೀನ ಇಲ್ಲದೇ ಇದ್ದರು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಮರು ವಿಚಾರಣೆಃ ಇಲ್ಲ.)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**